ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1284/2022

| | | | |
|---|---|---|---|
| ಹೆಸರು | : | ಮಣಿಕಂಠ | ಪಿ.ಡಬ್ಲ್ಯೂ :1 |
| ತಂದೆ ಹೆಸರು | : | ಚಂದ್ರಶೇಖರ | ಸಿ.ಡಬ್ಲ್ಯೂ : 1 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಹೋಟೇಲ್ ಉದ್ಯಮಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 07.11.2023 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ13.02.2022 ರಂದು ಗುಬ್ಬಿ ಟೌನ್ ಸಿವಿಆರ್ ಬಾರ್ ಎದುರುಗಡೆ ರಾತ್ರಿ 11.00 ಗಂಟೆಗೆ ನಮ್ಮ ಹೋಟೇಲ್ ಪ್ರಕಾಶ್ ರವರು ನಮ್ಮ ಲಾಡ್ಜ್ ನ customer ಅವರಿಗೆ ಊಟ ತೆಗೆದುಕೊಂಡು ಬರಲು ಹೋದಾಗ ಅವರು ಬರುತ್ತಿರುವಾಗ ಹಿಂದಿನಿಂದ ಒಂದು ಬೈಕ್ ಬಂದು ಗುದ್ದಿದೆ. ಅದು ಶಿವಮೊಗ್ಗ ಕಡೆಯಿಂದ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಬಂದು ರಸ್ತೆ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಾಸಾ- 2 ರವರಿಗೆ ಬೈಕ್ ಗುದ್ದಿತು. ಸದರಿ ಬೈಕ್ ನಂ.ಕೆಎ-06-ಇಎನ್-4804 ಹಿರೋ Splendor ಬೈಕ್. ಪ್ರಕಾಶ್ ಅವರಿಗೆ ಸೊಂಟಕ್ಕೆ , ಎಡಗಾಲು ಮತ್ತು ಕೈ ಗೆ ಪೆಟ್ಟಾಯಿತು. ನಂತರ ರಾತ್ರಿ 11.10 ಕ್ಕೆ ಅಲ್ಲಿ ಹೋಡಾಡುವ ಜನ ಅಪಘಾತದ ವಿಷಯ ನಮ್ಮ ಹೋಟೆಲ್ ಗೆ ಬಂದು ಹೇಳಿದರು. ನಾನು ಕೂಡಲೇ ಅಲ್ಲಿಗೆ ಹೋದೆ ಪ್ರಕಾಶ್ ಅವರಿಗೆ ತುಂಬಾ ಏಟಾಗಿತ್ತು. ಆತನನ್ನು ವಿಚಾರಿಸಿದೆ, ಆತ ಈ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿದ. ಕೂಡಲೇ ನಾನು ಆತನನ್ನು ಗುಬ್ಬಿ ಚಾಲುಕ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅವರು ತುಮಕೂರು ಹೇಮಾವತಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದರು. ಆತನನ್ನು ಹೇಮಾವತಿ ಆಸ್ಪತ್ರೆಗೆ ದಾಖಲು ಮಾಡಿ ಮರುದಿವಸ ನಾನು ಗುಬ್ಬಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ದೂರಿನಲ್ಲಿ ಸಾಕ್ಷಿ ತಮ್ಮ ಸಹಿ ಗುರುತಿಸುತ್ತಾರೆ. ದೂರನ್ನು ನಿಪಿ- 1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಾನು ಸ್ಥಳಕ್ಕೆ ಹೋದಾಗ ಆರೋಪಿ ಇದ್ದರು.

ಪ್ರಕಾಶ್



ಆರೋಪಿಯನ್ನು ನನಗೆ ತೋರಿಸಿದರು. ಈಗ ಅವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ದಿಃ15.02.2022 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದರು. ಘಟನಾ ಸ್ಥಳವನ್ನು ಪೋಲಿಸರಿಗೆ ಪ್ರಕಾಶ್ ತೋರಿಸಿದರು. ಮಧ್ಯಾಹ್ನ 2.45 ರಿಂದ 3.30 ರವರೆಗೆ ಮಹಜರ್ ಮಾಡಿದರು. ಆ ಸಮಯದಲ್ಲಿ ಅಲ್ಲಿ ಚಾಸಾ- 3 ಮತ್ತು 4 ಇದ್ದರು. ಅಲ್ಲಿ ನಮ್ಮ ಸಹಿಯನ್ನು ತೆಗೆದುಕೊಂಡರು. ಮಹಜರ್ ಅನ್ನು ನಿಪಿ- 2 ಎಂದು, ಸಾಕ್ಷಿ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

ದಿಃ15.02.2022 ರಂದು ಘಟನಾ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದ್ದೇನೆ ಎಂದರೆ ಸರಿ. ಆ ಸಮಯ ಪೊಲೀಸರು ಬೈಕ್ ನಂ.ಕೆಎ-06-ಇಎನ್-4804 ಹಿರೋ Splendor ಅನ್ನು ವಶಪಡಿಸಿಕೊಂಡರು ಎಂದರೆ ಸರಿ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನಾನು ಉಡುಪಿ ಹೋಟೆಲ್ ಮಾಲೀಕರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಪ್ರಕಾಶ್ ರವರು ನಮ್ಮ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಅಪಘಾತವಾದ ದಿನ ಪ್ರಕಾಶ್ ಹೋಟೆಲ್ ಗೆ ಕೆಲಸಕ್ಕೆ ಬಂದಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ನಮ್ಮ ಹೋಟೆಲ್ ಕೆಲಸದ ಸಮಯ ಬೆಳಿಗ್ಗೆ 6.30 ಯಿಂದ ರಾತ್ರಿ 10.30 ರವರೆಗೆ. ರಾತ್ರಿ 10.30 ನಂತರ ಹೋಟೆಲ್ ಮುಚ್ಚುತ್ತೇವೆ ಎಂದರೆ ಸರಿ. ದಿಃ13.02.2022 ರಂದು ಕೂಡ ರಾತ್ರಿ 10.30 ನಂತರ ನಮ್ಮ ಹೋಟೆಲ್ ಮುಚ್ಚಿತ್ತು ಎಂದರೆ ಸರಿ. ರಾತ್ರಿ 10.30 ನಂತರ ನಾನು ನನ್ನ ಸ್ನೇಹಿತರಾದ ಸಿದ್ದು, ನಾಗೇಂದ್ರ ಇವರ ಜೊತೆ ಮಾತಾನಾಡಿಕೊಂಡು ಹೊಟೇಲ್ ಎದುರು ನಿಂತಿದ್ದೆ. ಅಪಘಾತದ ವಿಷಯ ದಾರಿ ಹೋಕರು ತಿಳಿಸಿದರು.

ಅವರ ಹೆಸರು ನನಗೆ ಗೊತ್ತಿಲ್ಲ. ಘಟನಾ ಸ್ಥಳಕ್ಕೆ ನಾನು ಒಬ್ಬನೇ ಹೋದೆ. ಘಟನೆ ವಿಷಯ ನನಗೆ ತಿಳಿದಾಗ ನಾನು ಅಲ್ಲಿ ಒಬ್ಬನೆ ಇದ್ದೆ. ನನ್ನ ದೂರಿನಲ್ಲಿ ನಾನು ಈ ವಿಷಯ ತಿಳಿಸಿಲ್ಲ. ನನ್ನ ದೂರಿನಲ್ಲಿ ಅಪಘಾತ ಸಿ.ವಿ.ಆರ್. ಬಾರ್ ಎದುರು ಆಗಿದೆ ಎಂದೆ ಹೇಳಿದ್ದೇನೆ. ಪಂಚನಾಮೆಯಲ್ಲಿ ಇರುವ ಸ್ಥಳ, ದೂರಿನಲ್ಲಿ ಇರುವ ಸ್ಥಳ ಬೇರೆ ಎಂದರೆ ಎರಡೂ ಸ್ಥಳಗಳು ಅಕ್ಕ ಪಕ್ಕ ಇವೆ ಎಂದು ಹೇಳುತ್ತಾರೆ. ದೂರಿನಲ್ಲಿ ನನಗೆ ಬೈಕ್ ಡಿಕ್ಕಿ ಪಡಿಸಿದೆ ಎಂದು ಹೇಳಿದ್ದೇನೆ ಎಂದರೆ ಸರಿ. ನಾನು, ಪೋಲಿಸರು , ಪ್ರಕಾಶ್ ನಿಗೆ ಪರಿಹಾರ ಕೊಡಿಸಲು ಶರೀಕ್ ಆಗಿ ಸುಳ್ಳು ಕೇಸ್ ಅನ್ನು ಆರೋಪಿಯ ವಿರುದ್ಧ ಮಾಡಿದ್ದೇವೆ ಎಂದರೆ ಸರಿಯಲ್ಲ. ರಾತ್ರಿ 11.30 ಆಗಿದ್ದರಿಂದ ಕತ್ತಲು ಇರುತ್ತದೆ ಎಂದರೆ ಬೀದಿ ದೀಪಗಳು ಇದ್ದವು ಎಂದು ಹೇಳುತ್ತಾರೆ. ಆಗಾಗಿ ಆರೋಪಿ ಮತ್ತು ಇನ್ನೊಬ್ಬ ವ್ಯಕ್ತಿ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ದೂರಿನಲ್ಲಿ ಹೇಳಿದ್ದೇನೆ. ನಾನು ಆ ವ್ಯಕ್ತಿಯನ್ನು ನೋಡಿಲ್ಲ, ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.